# ಸಿಡ್ನಿ ಕನ್ನಡ ಸಂಘದ ರಾಜ್ಯೋತ್ಸವ ಕಾರ್ಯಕ್ರಮ ೨೦೦೫

## 'ಕರ್ನಾಟಕದ ಇತಿಹಾಸ'



ಶ್ರೀಮತಿ ಅಪರ್ಣ ನಾಗಶಯನ

ಸಿಡ್ನಿ ಕನ್ನಡ ಸಂಘದ ೨೦೦೫ನೇ ಸಾಲಿನ ರಾಜ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ 'ಕರ್ನಾಟಕದ ಇತಿಹಾಸ' ಇದೇ ನವಂಬರ್ ೧೨ರಂದು ರಿವರ್‌ಸೈಡ್ ಗರ್ಲ್ಸ್ ಹೈಸ್ಕೂಲ್, ಹಂಟ್ಲೀಸ್ ಪಾಯಿಂಟ್, ಗ್ಲೇಡ್ಸ್‌ವಿಲ್‌ನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಕನ್ನಡ ರಾಜ್ಯೋದಯದ ಸುವರ್ಣ ಮಹೋತ್ಸವದ ಸಮಯದಲ್ಲಿ 'ಕರ್ನಾಟಕದ ಇತಿಹಾಸ' ವಿಷಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅತ್ಯಂತ ಸೂಕ್ತವಾಗಿತ್ತು. ನಮ್ಮ ಇತಿಹಾಸದತ್ತ ಒಮ್ಮೆ ತಿರುಗಿ ನೋಡುವ ಸದವಕಾಶ ಸಿಡ್ನಿ ಕನ್ನಡಿಗರದಾಗಿತ್ತು. ಸ್ಥಳೀಯ ಪ್ರತಿಭೆಗಳು ಇದರಲ್ಲಿ ಭಾಗವಹಿಸಿ ಮನರಂಜನೆ ಜೊತೆಗೆ ಇತಿಹಾಸದ ಪುಟಗಳನ್ನು ಪ್ರೇಕ್ಷಕರಿಗೆ ತೆರೆದಿಟ್ಟು, ಕರ್ನಾಟಕದ ಬಗ್ಗೆ ಮಾಹಿತಿಗಳನ್ನು ನೀಡಿದರು. ಈ ಯಶಸ್ವೀ ಕಾರ್ಯಕ್ರಮದ ನಿರೂಪಣೆ ಹೊತ್ತಿದ್ದ ಶ್ರೀಮತಿ ಅಪರ್ಣ ನಾಗಶಯನ ಹೇಳಿದ ಈ ಮಾತುಗಳು ಇದಕ್ಕೆ ಪೂರಕ. 'ಕನ್ನಡದ ಬಗ್ಗೆ ಎಲ್ಲರಿಗೂ ಅಭಿಮಾನವಿರುವುದು ನಿಜ. ಕನ್ನಡತನದ ಅರಿವು ಆ ಅಭಿಮಾನವನ್ನು ಇಮ್ಮಡಿಗೊಳಿಸುವುದು ಖಂಡಿತ'.

ತಮ್ಮ ಮೋಹಕ ಕಂಠದಿಂದ, ಸ್ಪಷ್ಟವಾಗಿ ಸರಾಗವಾಗಿ ಕಾರ್ಯಕ್ರಮ ನಿರೂಪಿಸಿದ ಶ್ರೀಮತಿ ಅಪರ್ಣ ನಾಗಶಯನ ಕಾರ್ಯಕ್ರಮಕ್ಕೆ ಮೆರಗು ನೀಡಿದರು.



ಉಪಾಧ್ಯಕ್ಷೆ ಡಾ.ನಾಗಮ್ಮ ಪ್ರಕಾಶ್

೬.೩೦ಕ್ಕೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮೊದಲಿಗೆ ಸ್ವಾಗತ ಭಾಷಣ ಮಾಡಿದವರು ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷೆ ಡಾ.ನಾಗಮ್ಮ ಪ್ರಕಾಶ್. ಹಾಗೆಯೇ ಮುಂದಿನ ಜೂನ್‌ನಲ್ಲಿ ಏಷ್ಯಾ ಪೆಸಿಫಿಕ್ ಕನ್ನಡ ಕೂಟದ ಛಾತ್ರದಡಿಯಲ್ಲಿ ಮಂಜುಳಾ ಗುರುರಾಜ್ ಹಾಗೂ ಕೃಷ್ಣೇಗೌಡರು ಸಿಡ್ನಿಗೆ ಬರುತ್ತಿರುವ ವಿಷಯ ತಿಳಿಸಿದರು. ನಂತರದಲ್ಲಿ ಯುನೈಟೆಡ್ ಇಂಡಿಯನ್ ಅಸೋಸಿಯೇಷನ್‌ನ ಅಧ್ಯಕ್ಷರೂ, ಕನ್ನಡಿಗರೂ ಆದ ಡಾ.ಸಿದ್ದಲಿಂಗೇಶ್ವರ ಒರೆಕೊಂಡಿಯವರು ಮಾತನಾಡಿ, ಕನ್ನಡದ ಮೇಲಿನ ತಮ್ಮ ಅಭಿಮಾನವನ್ನು ತೋರಿದರು.



ಶ್ರೀಮತಿ ಪುಷ್ಪ ಜಗದೀಶ್

ಪುರಂದರ ದಾಸರ ಪರಿಚಯದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಯಿತು. ಸಮುದಾಯದಲ್ಲಿ ಚಿರಪರಿಚಿತರಾದ ಶ್ರೀಮತಿ ಪುಷ್ಪ ಜಗದೀಶ್‌ರವರು ಪುರಂದರದಾಸರ ಕೃತಿ 'ರಾಮ ಎಂಬ ಎರಡು ಅಕ್ಷರ' ಗೀತೆಯನ್ನು ಎಂದಿನಂತೆ ಸುಶ್ರಾವ್ಯವಾಗಿ ಹಾಡಿದರು. ನಂತರ ಯುವ ಪ್ರತಿಭೆಗಳಾದ ಕುಮಾರಿ ಪೂಜಾ ಮೂರ್ತಿ ಹಾಗೂ ಕುಮಾರಿ ಪಲ್ಲವಿ ಮೂರ್ತಿ, ಜಿ.ಎಸ್.ಶಿವರುದ್ರಪ್ಪನವರ 'ನವೋದಯದ ಕಿರಣಲೀಲೆ' ನಾಡಗೀತೆಯನ್ನು ಮಧುರವಾಗಿ ಹಾಡಿದರು.

ಇವರಿಗೆ ಸಹಾಯಕವಾಗಿ ಕೀಬೋರ್ಡ್‌ನಲ್ಲಿ ಚಿ. ವರುಣ್ ಭಾರದ್ವಾಜ್ ಮತ್ತು ತಬಲಾದಲ್ಲಿ ಚಿ. ಆದಿತ್ಯ ಪ್ರಸಾದ್ ಮೆಚ್ಚುಗೆ ಗಳಿಸಿದರು.






‘ಇತಿಹಾಸ ಕರ್ನಾಟಕ’ ಹೆಸರಿನ ಕಾರ್ಯಕ್ರಮದಲ್ಲಿ ಸುಮಾರು ೨೦ ಜನ ಹಾಡುತ್ತಿದ್ದು, ಮುಂದೆ ಮಕ್ಕಳು ಕರ್ನಾಟಕ ಕಂಡ ಕೆಲವು ಮಹನೀಯರ ವೇಷಭೂಷಣಗಳನ್ನು ಧರಿಸಿ, ಒಂದೆರಡು ಮಾತುಗಳನ್ನೂ ಆಡಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಒಟ್ಟು ೪೫ ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಇದರ ವಿಶೇಷ. ಇದರ ನಿರ್ದೇಶನ, ಶ್ರೀ ನಾರಾಯಣ ಕನಕಾಪುರ ರವರದು.





‘ಕರ್ನಾಟಕದ ಇತಿಹಾಸದಲಿ’ ಗೀತೆಗೆ ಮೊಹಕ ನೃತ್ಯ ಜೊತೆಗೆ ಕನ್ನಡ ಇತಿಹಾಸದ ಬಗ್ಗೆ ಒಂದೆರಡು ವಿವರಣೆ ಜೊತೆಗೆ ಪವರ್ ಪಾಯಿಂಟ್ ಸ್ಲೈಡ್ ಶೋ, ಇದನ್ನು ನಡೆಸಿಕೊಟ್ಟವರು ಚಿ. ಅಕ್ಷಯ್ ರಾವ್, ಕು. ಅಮಿತಾ ರಾವ್, ಚಿ. ನಿಕಿತ್ ನಂಜನ್‌ಗೂಡ್. ನೃತ್ಯ ನಿರ್ದೇಶನ ಶ್ರೀಮತಿ. ಅನು ರಾಮೋಂದರ್ ಮತ್ತು ಶ್ರೀಮತಿ. ಹೇಮಾ ರಾವ್.





‘ತೆನಾಲಿ ರಾಮಕೃಷ್ಣ’ – ವಿಭಿನ್ನ ರೀತಿಯ ನಾಟಕ. ಕಥೆಯನ್ನು ಹೇಳುತ್ತಾ ಹಾಗೇ ತಾವೇ ಪಾತ್ರಧಾರಿಗಳಾಗಿ ಅಭಿನಯಿಸಿ ಮತ್ತೆ ಕಥೆಗಾರರಾಗಿ ಕಥೆ ಮುಂದುವರೆಸುವ ಈ ನಾಟಕದಲ್ಲಿ ಮೊದಲು ‘ಅಪಾರ ಕೀರ್ತಿ ಗಳಿಸಿ’ ಹಾಡಿಗೆ ನೃತ್ಯ ಸಹ ಇತ್ತು. ಪುಟ್ಟ ಬಾಲಕಿಯರಾದ ಕು.ಗಾರ್ಗಿ ಬೆಳ್ಳಾವೆ ಹಾಗೂ ಕು.ಸ್ಮೃತಿ ರಾವ್ ಈ ರೂಪಕವನ್ನು ತಮ್ಮ ವಿಶಿಷ್ಟ ಅಭಿನಯದಿಂದ ಅದರಲ್ಲೂ ಕನ್ನಡದಲ್ಲೇ ಕಾರ್ಯಕ್ರಮ ನಡೆಸಿ ಪ್ರೇಕ್ಷಕರ ಮನಗೆದ್ದರು.



ಬೆಳ್ಳಾವೆ ನಾಗಶಯನ, ಅಪರ್ಣ ನಾಗಶಯನ, ಶ್ರೀಮತಿ ಗೀತ ಮುರಳೀಧರ್



ಡಾ.ಸಿದ್ಧಲಿಂಗೇಶ್ವರ ಒರೇಕೊಂಡಿ

ಸಿಡ್ನಿಯಲ್ಲಿ ನಡೆಯುತ್ತಿರುವ ಸುಗಮ ಕನ್ನಡ ಶಾಲೆಯ ಮಕ್ಕಳು ಕನ್ನಡದಲ್ಲೇ ವಿವರಣೆ ನೀಡಿ ಕರ್ನಾಟಕದ ಕೆಲವು ಪ್ರೇಕ್ಷಣೀಯ ಸ್ಥಳಗಳ ಸ್ಲೈಡ್ ಶೋ, ‘ಕಣ್ಣು ಕೋರೈಸುವ ಕರ್ನಾಟಕ’ ನಡೆಸಿಕೊಟ್ಟರು. ಅದೇ ಧಾಟಿಯಲ್ಲಿ ಬೇಲೂರಿನ ಕಲಾವೈಭವವನ್ನು ಬಣ್ಣಿಸುವ ‘ಬೇಲೂರು – ಕರ್ನಾಟಕದ ಕಲಾಮುಕುಟ’ ಎಂಬ ನಾಟಕ, ಶ್ರೀ ರಮೇಶ್ ಬಸವಾಪಟ್ನರ ನಿರ್ದೇಶನದಲ್ಲಿ ಮೂಡಿಬಂತು. ಬೇಲೂರಿನ ಶಿಲ್ಪ ಸಂಪತ್ತನು ಬಣ್ಣಿಸುವ ಈ ನಾಟಕದಲ್ಲಿ ನಾಟ್ಯರಾಣಿ ಶಾಂತಲೆಯನ್ನು ನೆನಪಿಸುವ ನೃತ್ಯವನ್ನು ಶ್ರೀಮತಿ ಆರತಿ ಬಕ್ಷಿ ಸೊಗಸಾಗಿ ಮಾಡಿದರು. ಶಿಲಾಬಾಲಿಕೆಯರಾಗಿ ಕು. ಜ್ಯೋತ್ಸ್ನಾ, ಕು. ಆಶಿ ಹಾಗೂ ಕು. ವಂಶಿಕಾ ಮನಸೆಳೆದರು.




ಡಾ.ಹರೀಶ್–ನ್ಯೂಯಾರ್ಕ್– ಡಾ.ನಾಗಮ್ಮ ಪ್ರಕಾಶ್



ಶ್ರೀ ಲಕ್ಷ್ಮಣ್ ಭಾರದ್ವಾಜ್–ಡಾ.ನಾಗಮ್ಮ ಪ್ರಕಾಶ್

ಇದೇ ನವಂಬರ್ ೨೩ ಕನ್ನಡಕ್ಕೊಬ್ಬರೇ ಕೈಲಾಸಂ ಪುಣ್ಯತಿಥಿ. ಅವರ ಸ್ಮರಣಾರ್ಥ ಕೈಲಾಸಂರವರ ಕೆಲವು ವಿನೋದ ಗೀತೆಗಳನ್ನು ಹಾಡಿ, ಅವರ ಹಾಸ್ಯ ಪ್ರಸಂಗಗಳನ್ನು ಪ್ರೇಕ್ಷಕರಿಗೆ ನೀಡಿ, ಮನಸ್ಸನ್ನು ಮುದಗೊಳಿಸಿ, ನಗಿಸಿದವರು, ಶ್ರೀಮತಿ ಗೀತ ಮುರಳೀಧರ್, ಶ್ರೀಮತಿ ಅಪರ್ಣ ನಾಗಶಯನ ಹಾಗೂ ಶ್ರೀ ಬೆಳ್ಳಾವೆ ನಾಗಶಯನ.

ಅದರ ನಂತರ ಅತಿಥಿಗಳಾಗಿ ನ್ಯೂಯಾರ್ಕ್‌ನಿಂದ ಆಗಮಿಸಿದ್ದ ಡಾ.ಹರೀಶ್ ‘ಸನಾತನ ಧರ್ಮ’ದ ಬಗ್ಗೆ ಒಂದೆರಡು ಮಾತನಾಡಿದರು. ಮತ್ತೊಬ್ಬ ಅತಿಥಿ, ಶ್ರೀ ಲಕ್ಷ್ಮಣ್ ಭಾರದ್ವಾಜ್, ಕನ್ನಡ ಚಿತ್ರರಂಗದಲ್ಲಿ ಅಪಾರ ಹೆಸರನ್ನು ಮಾಡಿರುವ ನಿರ್ಮಾಪಕ, ನಿರ್ದೇಶಕ ಶಿವಶಂಕರ್‌ರವರ ಪುತ್ರ. ಸಿಡ್ನಿ ಕನ್ನಡಿಗರಿಗಾಗಿಯೇ ಕಳುಹಿಸಿದ್ದ ಶಿವಶಂಕರ್‌ರವರ ಸಂದೇಶವನ್ನು ಕಾರ್ಯಕ್ರಮ ನಿರೂಪಕಿ ಶ್ರೀಮತಿ ಅಪರ್ಣ ನಾಗಶಯನ ಓದಿದರು. ಲಕ್ಷ್ಮಣ್ ಭಾರದ್ವಾಜ್ ತಮ್ಮ ಹಾಸ್ಯದಿಂದ ಪ್ರೇಕ್ಷಕರನ್ನು ರಂಜಿಸಿದರು.



ಶ್ರೀ ನಾರಾಯಣ ಕನಕಾಪುರ–ಡಾ.ನಾಗಮ್ಮ ಪ್ರಕಾಶ್



ಶ್ರೀ ಮನೋಹರ್– ಡಾ.ನಾಗಮ್ಮ ಪ್ರಕಾಶ್

ಹಾಗೆಯೇ ಇನ್ನೊಬ್ಬ ಅತಿಥಿ, ಶ್ರೀ ಮನೋಹರ್ ಸಹ, ಚಲನಚಿತ್ರ ನಟರನ್ನು ಅನುಕರಣೆ ಮಾಡಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಿದರು.

ಸಂಘದ ಉಪಾಧ್ಯಕ್ಷೆ ಡಾ.ನಾಗಮ್ಮ ಪ್ರಕಾಶ್ ಅತಿಥಿಗಳಿಗೆ ಹಾಗೂ ಸುಗಮ ಕನ್ನಡ ಶಾಲೆ ನಡೆಸುತ್ತಿರುವ ನಾರಾಯಣ್‌ರವರಿಗೆ ನೆನಪಿನ ಕಾಣಿಕೆಯನ್ನು ನೀಡಿದರು. ಇದೇ ಸಮಯದಲ್ಲಿ ಸುಗಮ ಕನ್ನಡ ಶಾಲೆಯ ನಾಲ್ಕು ಪ್ರತಿಭಾನ್ವಿತ ಮಕ್ಕಳಿಗೆ ಸಿಡ್ನಿ ಕನ್ನಡ ಸಂಘದ ವತಿಯಿಂದ ಬಹುಮಾನ ಡಾ.ಹರೀಶ್‌ರವರಿಂದ ನೀಡಲಾಯಿತು.




ಶ್ರೀ ಜಗದೀಶ್ ಸೂರಿ,ಲಕ್ಷ್ಮಣ್,ಮನೋಹರ್,ನಾರಾಯಣ



ಡಾ.ಹರೀಶ್,ಡಾ.ಪ್ರಕಾಶ್, ಶ್ರೀ ಓಂಕಾರಸ್ವಾಮಿ

ಸಂಘದ ಕಾರ್ಯದರ್ಶಿ ಶ್ರೀ ಜಗದೀಶ್ ಸೂರಿ ವಂದನಾರ್ಪಣೆ ಸಲ್ಲಿಸಿದರು.






ಬಿಸಿಬೇಳೆ ಭಾತ್, ಮೊಸರನ್ನ, ಮೈಸೂರ್ ಪಾಕಿನ ಊಟದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಅರ್ಥಾತ್ ರಾಜ್ಯೋದಯದ ಸುವರ್ಣ ಮಹೋತ್ಸವ ಕಾರ್ಯಕ್ರಮಗಳಿಗೆ ನಾಂದಿಯಾಯಿತು. ಈ ಕಾರ್ಯಕ್ರಮದ ಮುಖ್ಯ ಪ್ರಾಯೋಜಕರು ಸಿಟಿ ಫ್ಲೋರೆಕ್ಸ್‌ನ ಶ್ರೀ ನರೇಂದ್ರ ನಾಯಕ್.

ಬೆಳ್ಳಾವೆ ನಾಗಶಯನ,
ಸಿಡ್ನಿ,
೧೨–೧೧–೨೦೦೫.